ಸರ್ಕಾರವು ಅನುದಾನ ಮುಂದುವರಿಸಲು ಮುಖ್ಯಮಂತ್ರಿಗಳು ಈಗಾಗಲೇ ಒಪ್ಪಿದ್ದಾರೆ. ಶೀಘ್ರದಲ್ಲಿಯೇ ಈ ಬಗ್ಗೆ ಸರ್ಕಾರದ ಆದೇಶವನ್ನು ಹೊರಡಿಸಲಾಗುವುದು.

ಶ್ರೀ ವೇದಾಂತ ಹೆಬ್ಬಾರ್.—ಮಾನ್ಯ ಅಧ್ಯಕ್ಷರೇ, ಈಗ 2 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲು ಮಾನ್ಯ ಮುಖ್ಯಮಂತ್ರಿಯವರು ಒಪ್ಪಿದ್ದಾರೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಕಳೆದ ಮೂರು ತಿಂಗಳುಗಳಿಂದ ರಾಜ್ಯದಲ್ಲಿರುವ ಸೂಪಾರು ಳಿರ ನೌಕರರಿಗೆ ಸಂಬಳ ಸಿಕ್ಕಿಲ್ಲ. ಆದುದರಿಂದ ಬಿಡುಗಡೆ ಮಾಡಲು ಒಪ್ಪಿರತಕ್ಕಂಥ 2 ಲಕ್ಷ ರೂಪಾಯಿಗಳ ಹಣವನ್ನು ತತ್‌ಕ್ಷಣ ಬಿಡುಗಡೆ ಮಾಡಬೇಕು, ಮತ್ತು ಬಾಕಿ ಉಳಿದಿರುವ ಅನುದಾನವನ್ನು ಕೂಡ ಕೂಡಲೇ ಬಿಡುಗಡೆ ಮಾಡಬೇಕು. ಈ ಒಂದು ಭಾರತ ಸೇವಾದಳವನ್ನು ಮಾನ್ಯ ಹರ್ಡೀಕರ್‌ರವರು ಮಹಾತ್ಮಗಾಂಧೀಜಿಯವರ ತತ್ವವನ್ನು ಅನುಸರಿಸಿ ಸ್ಥಾಪನೆ ಮಾಡಿದ್ದರು. ಅಂಥ ಒಂದು ಮಹಾನ್ ಸಂಸ್ಥೆ ಅವಾಗಿದೆ. ಅದಕ್ಕೆ ಅನುದಾನವನ್ನು ಕೊಡುವುದರಿಂದ ಒಂದು ಒಳ್ಳೆಯ ಕೆಲಸ ಮಾಡಿದ ಹಾಗೆ ಆಗುತ್ತದೆ. ಆದುದರಿಂದ ತತ್‌ಕ್ಷಣವೇ ಹಣವನ್ನು ಬಿಡುಗಡೆ ಮಾಡಿ ಅಲ್ಲಿರುವ ನೌಕರರಿಗೆ ಸಂಬಳ ದೊರಕುವಂತೆ ಮಾಡಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಿ ಎಲ್. ಶಂಕರ್.—ಅಧ್ಯಕ್ಷರೇ, ೪-೫-೧೯೮೨ ರ ಸರಕಾರಿ ಆದೇಶದಲ್ಲಿ ಅನುದಾನವನ್ನು ಆ ಸಂಸ್ಥೆಗೆ ನಿಲ್ಲಿಸಬೇಕೆಂದು ಆದೇಶ ಹೊರಾಟ ಕಾರಣದಿಂದಾಗಿ ಅನುದಾನವನ್ನು ಕೊಡಲಿಕ್ಕೆ ಆಗಲಿಲ್ಲ. ಬಾಕಿ ಇರತಕ್ಕಂಥ ಹಣದಲ್ಲಿ ೩ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಆದೇಶ ಹೊಗಿದೆ. ಈ ವಾರದಲ್ಲಿ ಆ ಹಣವು ಬಿಡುಗಡೆ ಆಗುತ್ತದೆ ಎಂದು ಹೇಳಬಯಸುತ್ತೇನೆ.

೧೧. ರಾಜಾಸ್ಥಾನದಲ್ಲಿ ಎನ್. ಜಿ. ಇ. ಎಫ್. ಸಂಸ್ಥೆಯವರು ರೆಕ್ಟಿಫೈಯರ್ ಸ್ಥಾಪಿಸುವ ಸಂದರ್ಭದಲ್ಲಿ ೭೫ ಲಕ್ಷ ರೂಪಾಯಿ ನಷ್ಟವಾಗಿರುವುದು

ಶ್ರೀ ಆರ್. ವೆಂಕಟರಾಮಯ್ಯ,—ಮಾನ್ಯ ಅಧ್ಯಕ್ಷರೇ, ರಾಜಾಸ್ಥಾನದಲ್ಲಿ ಎನ್. ಜಿ. ಇ. ಎಫ್. ಸಂಸ್ಥೆಯವರು ರೆಕ್ಟಿಫೈಯರ್ ಸ್ಥಾಪಿಸುವಂತಹ ಸಂದರ್ಭದಲ್ಲಿ ಕೆಟ್ಟ ತಂತ್ರಜ್ಞಾನದಿಂದಾಗಿ ೭೫ ಲಕ್ಷ ರೂಪಾಯಿಗಳ ನಷ್ಟವಾಗಿರುವುದರ ಬಗ್ಗೆ ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ

ಅಧ್ಯಕ್ಷರು —ಮಾನ್ಯ ಲಕ್ಷ್ಮೀಸಾಗರ್‌ರವರೇ ಮಾನ್ಯ ವೆಂಕಟರಾಮಯ್ಯನವರ ಕಾಲಿಂಗ್ ಅಟೆನ್‌ಷನ್‌ಗೆ ಯಾರು ಉತ್ತರ ಕೊಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾಳೆ ಇಲ್ಲವೇ ಆಮೇಲೆ ಇದನ್ನು ತೆಗೆದುಕೊಳ್ಳಿ ಸಂಬಂಧಪಟ್ಟ ಮಂತ್ರಿಗಳು ಆ ಮನೆಗೆ ಹೋಗಿದ್ದಾರೆ

ಅಧ್ಯಕ್ಷರು.—ಉತ್ತರ ಕೊಡಿಸುತ್ತೇನೆ. ಈಗ ೩೫೪ ಅನ್ನು ತೆಗೆದುಕೊಳ್ಳೋಣ.

## MATTER UNDER RULE 334

### Disturbed Power supply to farmers in the State

SRI R. VENKATARAMAIAH.—Sir, in Karnataka there is lot of inconvenience caused to the public at large due to disturbed power supply, through the agriculturists are told that they will get power from 6 p.m to 11 a.m. and 12 p.m. to 6 p.m. and from 6 p.m to 6 a.m. There is always break of power supply every hour during the time. The KEB officials at their level will say it is due to fault of persons at Bangalore or at some place. Even in residential installations we are facing the same trouble. Hence, I call upon